# ಹಲವು ಮಾರ್ಗಗಳು



✻ ಭಗವಂತ ನಿರಾಕಾರ ಎಂಬ ವಿಶ್ವಾಸವಿದ್ದರೂ ಆತನ ಸಾಕ್ಷಾತ್ಕಾರ ದೊರೆಯುತ್ತದೆ, ಸಾಕಾರ ಎಂಬ ವಿಶ್ವಾಸವಿದ್ದರೂ ಆತನ ಸಾಕ್ಷಾತ್ಕಾರ ದೊರೆಯುತ್ತದೆ. ಆತನ ಸಾಕ್ಷಾತ್ಕಾರಕ್ಕೆ ಆತನಲ್ಲಿ ವಿಶ್ವಾಸವಿರುವುದು ಮತ್ತು ಆತನಿಗೆ ಶರಣಾಗತನಾಗುವುದು ಇವೆರಡೂ ಆವಶ್ಯಕ. ಸ್ವಾಭಾವಿಕವಾಗಿ ಮನುಷ್ಯ ಅಜ್ಞಾನಿ. ತಪ್ಪುವುದು ಸ್ವಾಭಾವಿಕ. ಒಂದು ಸೇರಿನ ಗಡಿಗೆಯಲ್ಲಿ ನಾಲ್ಕು ಸೇರು ಹಾಲು ಹಿಡಿಯಬಲ್ಲುದೆ? ಆದರೆ ಯಾವ ಮಾರ್ಗ ಅನುಸರಿಸಿದರೂ ಸರಿಯೆ. ವ್ಯಾಕುಲ ಚಿತ್ತದಿಂದ ಆತನನ್ನು ಕರೆಯಬೇಕು. ಆತ ಅಂತರ್ಯಾಮಿ. ಹೃತ್ಪೂರ್ವಕವಾದ ಕರೆಗೆ ಆತ ಕಿವಿಗೊಟ್ಟೇ ಕೊಡುತ್ತಾನೆ. ವ್ಯಾಕುಲನಾಗಿ ಸಾಕಾರವಾದಿಗಳ ಮಾರ್ಗದಲ್ಲಾದರೂ ಹೋಗು, ನಿರಾಕಾರವಾದಿಗಳ ಮಾರ್ಗದಲ್ಲಾದರೂ ಹೋಗು, ಆತನೇ ದೊರೆಯುತ್ತಾನೆ. ಕಜ್ಜಾಯವನ್ನು ಉದ್ದುದ್ದವಾಗಿ ಕಡಿದು ತಿಂದರೂ ಸಿಹಿ, ಅಡ್ಡಡ್ಡಲಾಗಿ ಕಡಿದು ತಿಂದರೂ ಸಿಹಿ.

✻ ಅನೇಕ ಮಾರ್ಗಗಳಲ್ಲಿ ವಿಚಾರಮಾರ್ಗವೂ ಒಂದು. ಇದು ವೇದಾಂತವಾದಿಗಳ ಮಾರ್ಗ. ಬೇರೊಂದು ಮಾರ್ಗವಿದೆ, ಭಕ್ತಿಮಾರ್ಗ. ಭಕ್ತನು ಬ್ರಹ್ಮಜ್ಞಾನ ಬೇಕೆಂದು ವ್ಯಾಕುಲಚಿತ್ತದಿಂದ ಅತ್ತರೆ, ಅದೂ ಆತನಿಗೆ ದೊರೆತುಬಿಡುತ್ತದೆ. ಜ್ಞಾನಯೋಗ ಮತ್ತು ಭಕ್ತಿಯೋಗ ಎರಡೂ ಭಗವಂತನ ಸಾಕ್ಷಾತ್ಕಾರಕ್ಕೆ ಮಾರ್ಗಗಳೇ.

✻ ಇವೆರಡೂ ಮಾರ್ಗಗಳಿಂದಲೂ ಬ್ರಹ್ಮಜ್ಞಾನವನ್ನು ಪಡೆಯಬಹುದು. ಕೆಲಕೆಲವರು ಬ್ರಹ್ಮಜ್ಞಾನವನ್ನು ಪಡೆದುಕೊಂಡ ನಂತರವೂ ಲೋಕಶಿಕ್ಷಣಾರ್ಥವಾಗಿ ಭಕ್ತರಾಗಿಯೇ ಉಳಿಯುವರು; ಉದಾಹರಣೆಗೆ ಅವತಾರಾದಿಗಳು.

✻ ಭಕ್ತನು ವಿದ್ಯಾಮಾಯೆಯನ್ನು ಆಶ್ರಯಿಸಿಕೊಂಡು ಇರುತ್ತಾನೆ. ಸಾಧುಸಂಗ, ತೀರ್ಥಯಾತ್ರೆ, ಜ್ಞಾನ, ವೈರಾಗ್ಯ ಇವುಗಳೆಲ್ಲದರ ಆಶ್ರಯಮಾಡಿಕೊಂಡು ಇರುತ್ತಾನೆ. ಆತ ಹೇಳುತ್ತಾನೆ, ' ''ಅಹಂ'' ಎಂಬುದು ಸಹಜವಾಗಿ ಹೋಗದೆ ಇರುವುದರಿಂದ, ಆ ನೀಚ ''ಅಹಂ'' ಭಗವಂತನ ದಾಸನಾಗಿಯೊ, ಭಗವಂತನ ಭಕ್ತನಾಗಿಯೊ ಇರಲಿ' ಅಂತ.

✻ ಭಕ್ತನಿಗೂ ಏಕಾಕಾರ ಜ್ಞಾನ ದೊರಕುತ್ತದೆ; ಆತನಿಗೆ ಭಗವಂತನೊಬ್ಬನಲ್ಲದೆ ಬೇರೆ ಏನೂ ಕಾಣದು. ಆತ ಎಲ್ಲವೂ 'ಸ್ವಪ್ನವತ್' ಅಂತ ಹೇಳುವುದಿಲ್ಲ, ಆದರೆ ಹೇಳುತ್ತಾನೆ, 'ಭಗವಂತನೇ ಸಮಸ್ತವೂ ಆಗಿದ್ದಾನೆ' ಅಂತ. ಮೇಣದ ತೋಟದಲ್ಲಿ ನಾನಾ ಆಕಾರಗಳನ್ನು ನೋಡಬಹುದು. ಆದರೆ ಪ್ರತಿಯೊಂದೂ ಮೇಣದಿಂದ ನಿರ್ಮಿತವಾದುದೆ.

✻ ಎಲ್ಲಿಯವರೆಗೆ ಆತ 'ಅಹಂ' ಎಂಬುದನ್ನು ಇಟ್ಟಿರುವನೋ, ಅಲ್ಲಿಯವರೆಗೆ ಯಾವುದಾದರೂ ಒಂದು ಭಾವವನ್ನು — ಶಾಂತ, ದಾಸ್ಯ, ವಾತ್ಸಲ್ಯ ಇವೇ ಮೊದಲಾದುವನ್ನು ಆರೋಪಿಸಿಕೊಂಡು ಆತನನ್ನು ಕರೆಯಬೇಕು.

✻ ಹಲವಾರು ವಿಧದಿಂದ ಜನ ಆತನ ಸಾಕ್ಷಾತ್ಕಾರವನ್ನು ಪಡೆದಿದ್ದಾರೆ. ಕೆಲವರು ಬಹಳವಾಗಿ ಸಾಧನೆ ಭಜನೆ ತಪಸ್ಸನ್ನು ಮಾಡಿದವರು; ಇವರೇ ಸಾಧನ ಸಿದ್ಧರು. ಕೆಲವರು ನಾರದ ಶುಕದೇವಾದಿಗಳೋಪಾದಿಯಲ್ಲಿ ಆಜನ್ಮಸಿದ್ಧರು; ಇವರನ್ನು ನಿತ್ಯಸಿದ್ಧರು ಅಂತ ಕರೆಯಬಹುದು. ಮತ್ತೆ ಹಠಾತ್–ಸಿದ್ಧರು ಎಂಬುವವರಿದ್ದಾರೆ; ಹಠಾತ್ತಾಗಿ ಸಾಕ್ಷಾತ್ಕಾರ ಪಡೆದುಕೊಂಡಿರತಕ್ಕವರು. ಇದು ಮನುಷ್ಯ ಇದ್ದಕ್ಕಿದ್ದ ಹಾಗೆ ಕುಬೇರನಾಗುವ ಹಾಗೆ. ಜೊತೆಗೆ ಸ್ವಪ್ನ–ಸಿದ್ಧರು, ಕೃಪಾ–ಸಿದ್ಧರು ಎಂಬುವವರೂ ಇದ್ದಾರೆ.

✻ 'ನೀನು ಭಗವಂತ, ನಾನು ಭಕ್ತ' ಇದು ಭಕ್ತನ ಭಾವ — 'ಭಕ್ತಿಯ ಅಹಂ' ಎಂಬುದು ಇದೇನೇ. ಏಕೆ, ಭಕ್ತ 'ಭಕ್ತಿಯ ಅಹಂ' ಇಟ್ಟುಕೊಳ್ಳುತ್ತಾನೆ? ಆತನ ಭಾವನೆ, ಈ 'ಅಹಂ' ಎಂಬುದು ಹೋಗತಕ್ಕದ್ದಲ್ಲ ; ಆದ್ದರಿಂದ ಈ ನೀಚ 'ಅಹಂ' 'ದಾಸ ಅಹಂ' ಆಗಿ, 'ಭಕ್ತನ ಅಹಂ' ಆಗಿ ಇರಲಿ ಅಂತ.

✻ ಬೇಕಾದಷ್ಟು ವಿಚಾರದಲ್ಲಿ ತೊಡಗು, 'ಅಹಂ' ಎಂಬುದು ಹೋಗುವುದಿಲ್ಲ. 'ಅಹಂ' ಎಂಬುದೇ ಕುಂಭ. ಬ್ರಹ್ಮನೇ ಎಲ್ಲೆಲ್ಲೂ ನೀರೇನೀರಾಗಿರುವ ಸಮುದ್ರ ಅಂತ ಇಟ್ಟುಕೊಳ್ಳಿ. ಕುಂಭದ ಒಳಗೂ ಹೊರಗೂ ನೀರು ತುಂಬಿದೆ; ಎಲ್ಲೆಲ್ಲೂ ಬರೀ ನೀರೇ ನೀರು; ಆದರೂ ಕುಂಭ ಎಂಬುದು ಮಾತ್ರ ಇದ್ದೇ ಇರುತ್ತದೆ. ಈ ಕುಂಭವೇ ಭಕ್ತನ 'ಅಹಂ' ಎಂಬುದರ ಸ್ವರೂಪ. ಎಲ್ಲಿಯವರೆಗೆ ಕುಂಭ ಎಂಬುದು ಇರುವುದೊ, ಅಲ್ಲಿಯವರೆಗೆ 'ನಾನು', 'ನೀನು', ಎಂಬುದು ಇದ್ದೇ ಇರುತ್ತದೆ; 'ನೀನು ಪ್ರಭು, ನಾನು ದಾಸ; ನೀನು ಭಗವಂತ, ನಾನು ಭಕ್ತ' ಎಂಬುವೂ ಇದ್ದೇ ಇರುತ್ತವೆ. ಬೇಕಾದಷ್ಟು ವಿಚಾರದಲ್ಲಿ ತೊಡಗು, ಇದು ಹೋಗತಕ್ಕದಲ್ಲ. ಕುಂಭವೇ ಹೋಗಿಬಿಟ್ಟಿತು ಅಂದರೆ ಆಗ ಅದು ಬೇರೆ ಸಮಾಚಾರ.

'**ಶ್ರೀರಾಮಕೃಷ್ಣ ವಚನವೇದ**'ದಿಂದ